# ಎನ್‌ಐಟಿಕೆ: 200 ಮಂದಿಗೆ ಗ್ರೋವ್ ವಿದ್ಯಾರ್ಥಿ ವೇತನ

ಮಂಗಳೂರು: ಸುರತ್ಕಲ್‌ನ ಕರ್ನಾಟಕ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ (ಎನ್‌ಐಟಿಕೆ) 2025–26ನೇ ಸಾಲಿನಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದ ವಿದ್ಯಾರ್ಥಿಗಳಿಗೆ ನೆರವಾಗುವ ಸಲುವಾಗಿ ವಿವಿಧ ಬಿ.ಟೆಕ್ ವಿಭಾಗಗಳ 200 ಎಂಜಿನಿಯರಿಂಗ್ ಪದವಿ ವಿದ್ಯಾರ್ಥಿಗಳನ್ನು ಗ್ರೋವ್ ಆರ್ಥಿಕ ಸೇವಾ ವೇದಿಕೆಯ ವಿದ್ಯಾರ್ಥಿವೇತನಕ್ಕೆ ಆಯ್ಕೆ ಮಾಡಿದೆ.

'ವೆಲ್ ಬೀಯಿಂಗ್ ವಿದ್ಯಾರ್ಥಿವೇತನ ಕಾರ್ಯ್ರಕಮದಡಿ 158 ಪುರುಷರು ಮತ್ತು 32 ಮಹಿಳೆಯರು ಸೇರಿ ಒಟ್ಟು 190 ವಿದ್ಯಾರ್ಥಿಗಳು ವಾರ್ಷಿಕ ₹70 ಸಾವಿರ ಪಡೆಯಲಿದ್ದಾರೆ. ಫುಲ್ ರೈಡ್ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಎಂಜಿನಿಯರಿಂಗ್ ಪದವಿಯ 10 ವಿದ್ಯಾರ್ಥಿನಿಯರಿಗೆ ವಾರ್ಷಿಕ ₹2.50 ಲಕ್ಷ ಪಡೆಯಲಿದ್ದಾರೆ.

ಶೈಕ್ಷಣಿಕ ಸಾಧನೆ, ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯದ ಆಧಾರದಲ್ಲಿ ಅರ್ಹರನ್ನು ಆಯ್ಕೆ ಮಾಡಲಾಗುತ್ತದೆ. ವೆಲ್ ಬೀಯಿಂಗ್ ವಿದ್ಯಾರ್ಥಿವೇತನಕ್ಕಾಗಿ ಸಿಜಿಪಿಎ ಕನಿಷ್ಠ 6.0 ಮತ್ತು ಕುಟುಂಬದ ವಾರ್ಷಿಕ ಆದಾಯ ₹1 ಲಕ್ಷಕ್ಕಿಂತ ಕಡಿಮೆ ಇರಬೇಕು. ಫುಲ್ ರೈಡ್ ವಿದ್ಯಾರ್ಥಿವೇತನಕ್ಕೆ ಸಿಜಿಪಿಎ ಕನಿಷ್ಠ 6.5 ಮತ್ತು ಕುಟುಂಬ ಆದಾಯ ₹8 ಲಕ್ಷದ ಒಳಗೆ ಇರಬೇಕು. ಹಾಜರಾತಿ ಶೇ 75ರಷ್ಟಿರಬೇಕು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

Prajavani, Date: 11/06/26, p. 03